ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦	ಬೆಂಗಳೂರು, ಮಂಗಳವಾರ, ೧೬ ಸೆಪ್ಟೆಂಬರ್, ೨೦೨೫ (ಭಾದ್ರಪದ ೨೫, ಶಕವರ್ಷ ೧೯೪೭)	ಸಂಚಿಕೆ ೧೭೯
Volume - 160	BENGALURU, TUESDAY, 16 SEPTEMBER, 2025 (BHADRAPADA 25, SHAKAVARSHA 1947)	Issue 179

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿ., ಹುಕ್ಕೇರಿ ಈ ಸಂಘದ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಲು ಹಾಗೂ ಮತದಾನ ಮಾಡಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 20(2)(ಎ-iii) ರ ನಿಬಂಧನೆಗೆ ವಿನಾಯಿತಿ ನೀಡುವ ಬಗ್ಗೆ.

ಓದಲಾಗಿದೆ:- ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಓಟಿಎಸ್-2/35/ಹೆಚ್‌ಓಟಿ/2025-26, ದಿನಾಂಕ:22.08.2025.

*****

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿ., ಹುಕ್ಕೇರಿ ಈ ಸಹಕಾರಿ ಸಂಘದ ಕಾರ್ಯವ್ಯಾಪ್ತಿಯು ಹುಕ್ಕೇರಿ ತಾಲ್ಲೂಕು ಹಾಗೂ ಬೆಳಗಾವಿ ತಾಲ್ಲೂಕಿನ ಸುತಗಟ್ಟಿ ಗ್ರಾಮಕ್ಕೆ ಸೀಮಿತವಾಗಿರುತ್ತದೆಂದು, ಸದರಿ ಸಂಘದಿಂದ ಕೇಂದ್ರ ಸರ್ಕಾರದ ಯೋಜನೆಯಾದ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ ಸುಮಾರು 12,454 ಮನೆಗಳಿಗೆ ಹಾಗೂ ಸೌಭಾಗ್ಯ ಯೋಜನೆಯಡಿ ಸುಮಾರು 8,720 ಮನೆಗಳಿಗೆ ಒಟ್ಟು 21,174 ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆಂದು, ಆದರೆ ಸದರಿಯವರುಗಳು ಸಂಘಕ್ಕೆ ಸದಸ್ಯತ್ವ ಹೊಂದಿರುವುದಿಲ್ಲವೆಂದು, ಈ ಸಂಬಂಧ ಸಂಘದಿಂದ ವಿದ್ಯುತ್ ಸಂಪರ್ಕವನ್ನು ಪಡೆದ ನಂತರ ಸಂಘದ ಸದಸ್ಯತ್ವ ಪಡೆಯುವುದು ಅವಶ್ಯಕವಾಗಿದ್ದರಿಂದ, ಸದಸ್ಯತ್ವ ಪಡೆಯುವಂತೆ ತಿಳಿಸಿದ ನಂತರ ಸುಮಾರು 7,882 ಸದಸ್ಯರು ಷೇರು ಹಣವನ್ನು ಪಾವತಿಸಿದ ಹಿನ್ನೆಲೆಯಲ್ಲಿ ದಿನಾಂಕ:28.07.2025 ರಂದು ಸದರಿಯವರಿಗೆ ಸದಸ್ಯತ್ವ ನೀಡಲಾಗಿರುತ್ತದೆಂದು, ಪ್ರಸ್ತುತ ಸಂಘದ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ:28.09.2025 ರಂದು ನಿಗದಿಯಾಗಿರುವುದರಿಂದ, ಸದರಿಯವರಿಗೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಮತದಾನದ ಹಕ್ಕನ್ನು ನೀಡುವುದು ಅವಶ್ಯವಾಗಿರುತ್ತದೆಂದು, ಆದಕಾರಣ, ಸದಸ್ಯತ್ವ ಪಡೆದಿರುವುದರಿಂದ, ಚುನಾವಣಾ ದಿನಾಂಕಕ್ಕೆ 12 ತಿಂಗಳು ಪೂರೈಸದೇ ಇರುವುದರಿಂದ, ಮತದಾನದಿಂದ ವಂಚಿತರಾಗುತ್ತಾರೆ. ಆದುದರಿಂದ, ದಿನಾಂಕ:28.09.2025 ರಂದು ನಡೆಯುವ ಚುನಾವಣೆಯಲ್ಲಿ ಭಾಗವಹಿಸಲು ಹಾಗೂ ಮತದಾನ ಮಾಡಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ಕಲಂ 20(2)(ಎiii) ರ ನಿಬಂಧನೆಗೆ ವಿನಾಯಿತಿ ನೀಡಿ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಎಲ್ಲಾ ಷೇರುದಾರ ಸದಸ್ಯರಿಗೂ ಮತದಾನ ಮಾಡಲು ಅವಕಾಶ ಕಲ್ಪಿಸಿಕೊಡುವಂತೆ ಸಹಕಾರ ಸಂಘಗಳ ನಿಬಂಧಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ

ಪರಿಶೀಲಿಸಲಾಗಿ, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿ., ಹುಕ್ಕೇರಿ ಈ ಸಹಕಾರಿ ಸಂಘದ ಆಡಳಿತ ಮಂಡಳಿಗೆ ದಿನಾಂಕ:28.09.2025 ರಂದು ಚುನಾವಣೆ ನಡೆಸಲಾಗುತ್ತಿದ್ದು, ದಿನಾಂಕ:28.07.2025 ರಂದು ಹೊಸದಾಗಿ ಸಂಘದ ಸದಸ್ಯತ್ವ ಪಡೆದಿರುವ 7,882 ಸದಸ್ಯರು ಚುನಾವಣೆಯ ದಿನಾಂಕಕ್ಕೆ 12 ತಿಂಗಳು ಪೂರೈಸದೇ ಇದ್ದರೂ ದಿನಾಂಕ: 28.09.2025 ರಂದು ನಡೆಯುವ ಚುನಾವಣೆಯಲ್ಲಿ ಭಾಗವಹಿಸಲು ಹಾಗೂ ಮತದಾನ ಮಾಡಲು ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 20(2)(ಎiii)ರ ನಿಬಂಧನೆಗೆ ವಿನಾಯಿತಿಯನ್ನು ನೀಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಕಾಯ್ದೆ ಕಲಂ 121ರಡಿಯಲ್ಲಿ ಅನುಮತಿ ನೀಡುವುದು ಸೂಕ್ತವೆಂದು ಭಾವಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 99 ಸಿಎಲ್‌ಎಮ್ 2025 (ಇ)
ಬೆಂಗಳೂರು, ದಿನಾಂಕ: 10.09.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 121 ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿ., ಹುಕ್ಕೇರಿ, ಇದರ ಆಡಳಿತ ಮಂಡಳಿ ಚುನಾವಣೆಗೆ ಸಂಬಂಧಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕರಣ 20(2)(ಎ-iii)ಕ್ಕೆ ವಿನಾಯಿತಿ ನೀಡಿ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಎಲ್ಲಾ ಷೇರುದಾರ ಸದಸ್ಯರಿಗೂ ಭಾಗವಹಿಸಲು ಹಾಗೂ ಮತದಾನ ಮಾಡಲು ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಂಗನಾಥ ಜಿ.)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-194

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH